**ಸಾಕ್ಷಿಯನ್ನು ದಿಃ 14.01.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ನಾನು ಚಲಾಯಿಸಿಕೊಂಡು ಹೋಗುತ್ತಿದ್ದ ಬೈಕ್ ನನಗೆ ಸೇರಿದ್ದು. ಈಗಲೂ ಅದನ್ನು ಉಪಯೋಗಿಸುತ್ತಿದ್ದೇನೆ. ಆ ದಿನ ಮೈಸೂರಿನಿಂದ ಜಟ್ಟಿಹುಂಡಿ ಬಳಿ ಹೋಗುತ್ತಿದ್ದೆ. ನನ್ನ ಹಿಂಭಾಗದಲ್ಲಿ ನರಸಿಂಹ ಎನ್ನುವವರು ಕುಳಿತಿದ್ದರು. ನನಗೆ ವಾಹನ ಚಲಾಯಿಸಲು ಪರವಾನಗಿ ಇತ್ತು. ಅದನ್ನು ಹಾಜರು ಪಡಿಸಲು ತೊಂದರೆ ಇಲ್ಲ. ಅಪಘಾತ ರಸ್ತೆ ದ್ವಿಪಥ ರಸ್ತೆ ಎಂದರೆ ಸರಿ. ಮಧ್ಯದಲ್ಲಿ ರಸ್ತೆ ವಿಭಜಕ ಇತ್ತು ಎಂದರೆ ಸರಿ. ಎದುರುದಾರ ವಾಹನ ಹಿಂಭಾಗದಿಂದ ಬಂದು ಡಿಕ್ಕಿ ಪಡಿಸಿರುತ್ತಾರೆ. ಅಪಘಾತ ಸಂದರ್ಭದಲ್ಲಿ ನಾನು ಗದ್ದಿಗೆ ಮುಖ್ಯ ರಸ್ತೆ ಕಡೆಯಿಂದ ಜಟ್ಟಿ ಹುಂಡಿ ಕಡೆಗೆ ವಾಹನವನ್ನು ತಿರುಗಿಸುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಜಟ್ಟಿಹುಂಡಿ ಗೇಟ್ ಮುಂದೆ ಇದ್ದು ನಾನು ನೇರವಾಗಿ ಹೋಗುತ್ತಿದ್ದೆ ಎನ್ನುತ್ತಾರೆ.

2. ನಿಪಿ. 4 ರಲ್ಲಿ ಅಪಘಾತ ಸ್ಥಳವನ್ನು ರಸ್ತೆಯ ಮಧ್ಯಭಾಗದಲ್ಲಿ ಡಿವೈಡರ್ ಬಳಿ ಕಾಣಿಸಿದ್ದಾರೆ ಎಂದರೆ ಅಪಘಾತ ಆದಾಗ ವಾಹನ ರಸ್ತೆಯ ಮಧ್ಯಕ್ಕೆ ಹೋಗಿ ಬಿದ್ದಿದೆ ಎನ್ನುತ್ತಾರೆ. ನನ್ನ ಹಿಂಬದಿ ಸವಾರ ನರಸಿಂಹನಿಗೂ ಸಹ ಪೆಟ್ಟಾಗಿತ್ತು. ನನಗೆ ಅಪಘಾತ ಆದಾಗ ಪ್ರಜ್ಞೆ ಇತ್ತು. ಮೊದಲಿಗೆ ವಿದ್ಯಾರಣ್ಯ ಆಸ್ಪತ್ರೆಗೆ ಹೋಗಿದ್ದೇವೆ. ಆಂಬೂಲೆನ್ಸ್ ನಲ್ಲಿ ಹೋಗಿದ್ದೇವೋ ಇಲ್ಲವೋ ಸರಿಯಾಗಿ ನೆನಪಿಲ್ಲ. ನರಸಿಂಹ ರವರು ಸಹ ವಿದ್ಯಾರಣ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಪೋಲೀಸರು ನಾನು ಆಸ್ಪತ್ರೆಯಲ್ಲಿದ್ದಾಗ ಆಸ್ಪತ್ರೆಗೆ ಬಂದು ಮಾಹಿತಿ ಪಡೆದಿದ್ದಾರೆ. ಅಪಘಾತ ನಾನು ಹೇಳಿದಂತೆ ಆಗದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಾನು 8-10 ದಿನ ಆಸ್ಪತ್ರೆಯಲ್ಲಿ ದಾಖಲಾಗಿದ್ದೆ. ಶಸ್ತ್ರ ಚಿಕಿತ್ಸೆ ಮಾಡಿದ್ದಾರೆ. ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ 10-15 ಬಾರಿ ಚಿಕಿತ್ಸೆಗೆ ಹೋಗಿದ್ದನು. ಕೊನೆಯಬಾರಿ 15 ದಿನದ ಹಿಂದೆ ಹೋಗಿದ್ದು 20 ನೇ ತಾರೀಖಿನಂದು ಬರಲು ಹೇಳಿದ್ದಾರೆ. 20 ನೇ ತಾರೀಖು

ಎಕ್ಸರೇ ಮಾಡುವುದಾಗಿ ಹೇಳಿ ಕಳಿಯಿಸಿರುತ್ತಾರೆ. ಅಳವಡಿಸಿರುವ ಪ್ಲೇಟ್ ಅನ್ನು ತೆಗೆಯುವುದಾಗಿ ಹೇಳಿರುತ್ತಾರೆ. ನಾನು ಗುಣಮುಖನಾಗಿರುವ ಕಾರಣ ಪ್ಲೇಟ್ ತೆಗೆಯಲು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಡಾ. ದೀಪಕ್ ಮತ್ತು ಡಾ. ಆನಂದ್ ಚಿಕಿತ್ಸೆ ನೀಡಿದ್ದಾರೆ. ಆಸ್ಪತ್ರೆ ವೆಚ್ಚವನ್ನು ನಾನೇ ಸಾಲ ಮಾಡಿ ಭರಿಸಿದ್ದೇನೆ. ಬಿಡುಗಡೆಯಾದ ನಂತರ ಆಸ್ಪತ್ರೆಗೆ ಆಗಾಗೆ ಹೋದ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಬಿಡುಗಡೆಯಾದ ನಂತರ ನಾನು ಆರೋಗ್ಯವಾಗಿದ್ದರೂ ಸಹ ಕೆಲಸ ಮಾಡಲು ಆಗುತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೊದಲು ವ್ಯವಸಾಯ ಮತ್ತು ಗಾರೆ ಕೆಲಸ ಮಾಡುತ್ತಿದ್ದೆ,ಈಗ ಮಾಡುತ್ತಿಲ್ಲ. ನಾನು ಆದಾಯ ಮತ್ತು ಕೆಲಸದ ಬಗ್ಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಸೂಚನೆ ನೀಡದೆ ನಾನು ಜಟ್ಟಿಹುಂಡಿ ಗೇಟ್ ಬಳಿ ವಾಹನವನ್ನು ಬಲಕ್ಕೆ ತೆಗೆದುಕೊಂಡ ಕಾರಣ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನನಗೆ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ಪೋಲೀಸರು ಎದುರುದಾರರ ವಾಹನದ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರ ವಾಹನ ಚಾಲಕನಿಗೆ ಚಾಲನ ಪರವಾನಗಿ ಇಲ್ಲದ ಕಾರಣ 2 ನೇ ಎದುರುದಾರರು ಪರಿಹಾರ ನೀಡಲು ಭಾದ್ಯರಲ್ಲ ಎಂದರೆ ನನಗೆ ಗೊತ್ತಿಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಆದ ಕಾರಣ ಎದುರುದಾರರು ಪರಿಹಾರ ನೀಡಲು ಭಾದ್ಯರಲ್ಲ ಎಂದರೆ ಸರಿಯಲ್ಲ.

1 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.